ಉಮಾಶಂಕರ ಸ್ವಾಮಿಗಳ ಸಿನಿಮಾ ಕಟ್ಟುವ ಶೈಲಿ ಸಾವಧಾನದ್ದು. ಅವರ ಸಿನಿಮಾಗಳಲ್ಲಿ ಪಾತ್ರಗಳು ಕಡಿಮೆಯಿದ್ದರೂ ವಿವರಗಳು ಕಿಕ್ಕಿರಿದಿರುತ್ತವೆ. 'ಸಾಲದ ಮಗು' ಚಿತ್ರದಲ್ಲಿನ ವಿವರಗಳು ಮಲೆನಾಡಿನ ಜೀವನಕ್ರಮವನ್ನು ಕಟ್ಟಿಕೊಡಲು ಪ್ರಯತ್ನಿಸುತ್ತವೆ. ಹರಿಯುವ ನೀರಿನಲ್ಲಿ ಮೀನು ಹಿಡಿಯುವುದು, ಹಕ್ಕಿ ಶಿಕಾರಿ, ಬೂದಿಯಲ್ಲಿ ತತ್ತಿಯನ್ನು ಸುಟ್ಟು ತಿನ್ನುವುದು, ಕವಳ, ಅಡಿಕೆ ಕೃಷಿ, ಮಳೆ, ಈಜು – ಇಂಥ ವಿವರಗಳ ಮೂಲಕ ನಿರ್ದೇಶಕರು ಮಲೆನಾಡಿನ ಅಂತರಂಗ ಕಟ್ಟಿಕೊಡಲು ಪ್ರಯತ್ನಿಸುತ್ತಾರೆ. ಎಚ್.ಎಂ. ರಾಮಚಂದ್ರರ ಛಾಯಾಗ್ರಹಣ ಹಾಗೂ ಎಸ್.ಆರ್. ರಾಮಕೃಷ್ಣರ ಸಂಗೀತ ಕೂಡ ಮಲೆನಾಡಿನ ಚೆಲುವಿಗೆ ಮರುಳಾಗದೆ, ಅದರ ಆಳಕ್ಕಿಳಿಯುವ ಪ್ರಯತ್ನವನ್ನು ನಡೆಸಿವೆ.

'ಮುನ್ನಿಫ'ನದು ಬಯಲುಸೀಮೆಯಲ್ಲಿ ನಡೆಯುವ ಕಥೆ. ಕಥೆಯಲ್ಲಿ ಇರುವ ಬರದ ಎಳೆಯೇ ಸಿನಿಮಾಕ್ಕೆ ಬಯಲುಸೀಮೆಯ ಪ್ರಾದೇಶಿಕತೆಯನ್ನು ಆರೋಪಿಸುವಂತಿದೆ. ಇನ್ನು ಜಿ.ಎಸ್. ಭಾಸ್ಕರ್ ಅವರ ಕ್ಯಾಮೆರಾ ಜಾಣ್ಮೆಯಲ್ಲಿ ಸುಂದರಪ್ಪ ಮತ್ತು ಬಸವನ ಸಂದಿಗ್ಧ ಮತ್ತು ಸಂಧಿಸುವಿಕೆ ಪರಿಣಾಮಕಾರಿಯಾಗಿ ಚಿತ್ರಣಗೊಂಡಿದೆ. ಎರಡು ಮನೋವಲಯಗಳನ್ನು ಸೂಚಿಸಲಿಕ್ಕಾಗಿ ಭಾಸ್ಕರ್ ಅವರು ಬಳಸಿಕೊಂಡಿರುವ ಬಣ್ಣದ ಹಾಗೂ ಕಪ್ಪುಬಿಳುಪಿನ ಶೈಲಿಗಳು ಸಿನಿಮಾದ ಭಾವತೀವ್ರತೆಯನ್ನು ಹೆಚ್ಚಿಸಿವೆ.

ಉಮಾಶಂಕರ ಸ್ವಾಮಿ ಅವರ ಸಿನಿಮಾಗಳು ಮೇಲ್ನೋಟಕ್ಕೆ ಭೂತಕಾಲದ ಕಥೆಗಳಂತೆ ಕಾಣಿಸುತ್ತವೆ. ಆದರೆ, ಸೂಕ್ಷ್ಮವಾಗಿ ನೋಡಿದರೆ ಈ ಚಿತ್ರಗಳು ಇಂದಿನ ಕಾಲದ ಕಥೆಗಳೂ ಹೌದು. 'ಸಾಲದ ಮಗು' ಸಿನಿಮಾದಲ್ಲಿನ ಶಿಕ್ಷಣ ವ್ಯವಸ್ಥೆ ಜೀತಗಾರಿಕೆಗೆ ಪೂರಕವಾಗಿದ್ದರೆ, 'ಮುನ್ನಿಫ'ನಲ್ಲಿನ ವಿದ್ಯಾವಂತರು ಮೌಲ್ಯಗಳ ದಿವಾಳಿತನದ ಅಭಿವ್ಯಕ್ತಿಯಂತಿದ್ದಾರೆ. ಜೀತ ಹಾಗೂ ಮೌಲ್ಯಗಳ ಸವಕಳಿ ಈ ಕಾಲದ ಸಮಸ್ಯೆಯೂ ಹೌದು. ಇಂದಿನ ಶಿಕ್ಷಣದ ಫಲಾನುಭವಿಗಳಾದ ತರುಣ ತರುಣಿಯರು ಬಹುರಾಷ್ಟ್ರೀಯ ಕಂಪೆನಿಗಳಿಗೆ ತಮ್ಮ ತಾರುಣ್ಯವನ್ನು ಅಡವಿಟ್ಟಿರುವುದು ಜೀತವಲ್ಲದೆ ಏನು? ಸಮಾಜದ ಕೇಂದ್ರದಲ್ಲಿ ಮಾರುಕಟ್ಟೆಗಳು ನಿಲ್ಲುತ್ತಿರುವುದು ಹಾಗೂ ಈ ಪೇಟೆಗಳೇ ಆಧುನಿಕತೆಯ ಚಹರೆಗಳಾಗಿರುವುದು ಮೌಲ್ಯಗಳ ಪಲ್ಲಟದ ಉದಾಹರಣೆಯಲ್ಲವೆ?. ಇನ್ನು, ಸ್ವಾಮಿ ಅವರ ಸಿನಿಮಾಗಳು ಸೂಚಿಸುವ ಜಾತೀಯತೆ ಕೂಡ ಆಧುನಿಕ ಸ್ವರೂಪದಲ್ಲಿ ನಮ್ಮನ್ನು ಬಾಧಿಸುತ್ತಲೇ ಇದೆ.

ಸುಬ್ಬ ಹಾಗೂ ಸುಂದರಪ್ಪ ತಂತಮ್ಮ ಕಥನಗಳಲ್ಲಿ ಒಂಟಿಯಾಗಿ ಉಳಿದವರು. ಇಂಥ ಅಸಂಖ್ಯ ಒಂಟಿಜೀವಗಳು ಈಗಲೂ ಹಳ್ಳಿಗಾಡುಗಳಲ್ಲಿ, ನಗರಗಳ ಓಣಿಗಳಲ್ಲಿ ವಿಳಾಸ ಇಲ್ಲದವರಂತೆ ಬದುಕುತ್ತಿದ್ದಾರೆ. 'ಸಾಲದ ಮಗು' ಸುಬ್ಬ ಹಲವು ರೂಪಗಳಲ್ಲಿ ನಮ್ಮನ್ನು ಬಹಿರಂಗವಾಗಿಯೇ ಆವರಿಸಿಕೊಂಡಿದ್ದಾನೆ. ಮುನ್ನಿಫ ಸುಂದರಪ್ಪ ಮಾತ್ರ ಯಾವ ಕ್ಷಣದಲ್ಲಾದರೂ ಮೊಳಕೆಯುವಂತೆ, ನಮ್ಮೊಳಗಿನ ಆಂತರಿಕ ತುಡಿತದಂತೆ ಜೀವಂತವಾಗಿದ್ದಾನೆ. ಬಹುಶಃ, ಸುಬ್ಬ ಮತ್ತು ಬಸವನ ಕಥೆಗಳು ಎಲ್ಲ ಕಾಲದ ಕಥೆಗಳೂ ಹೌದೇನೊ?

ಮತ್ತೆ ಅಳುವಿನ ವಿಷಯಕ್ಕೆ ಬರೋಣ. ಇಬ್ಬರು ಹುಡುಗರು ನಮ್ಮ ಎದೆಗೂಡುಗಳಲ್ಲಿ ಸೇರಿಕೊಂಡು ಅಳುತ್ತಿದ್ದಾರೆ! ಆದರೆ, ಮಕ್ಕಳ ಅಳಲಿಗೆ ಕಿವಿಗೊಡುವ ವ್ಯವಧಾನವೇ ನಮಗೆ ಇಲ್ಲವಾಗಿದೆ. ಇಲ್ಲೇ – ಅಂತರಂಗದಲ್ಲೇ – ದನಿಯಾಗುತ್ತಿರುವ ಅಳುವಿಗೆ ಕಿವುಡಾಗಿರುವ ನಾವೆಲ್ಲ, 'ಎಲ್ಲೋ ಮಗು ಅಳುತಾ ಇದೆ' ಎಂದು ಸಮಾಧಾನಪಟ್ಟುಕೊಳ್ಳುತ್ತೇವೆ. ✿